ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ರವರು, 'ಚಿಕ್ಕಸಿಂದೋಗಿ ಮರಳು ಬ್ಲಾಕ್'ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಹಿರೇಹಳ್ಳ ನದಿ ಪಕ್ಕದ ಸರ್ವೆ ನಂ. 143, 142, 141, 140 & 139, ಚಿಕ್ಕಸಿಂದೋಗಿ – ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 20.00 ಎಕರೆ (8.093 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 41,763 TPA ಸಾಮಾನ್ಯ ಮರಳು ಗಣಿಗಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ ತೆರೆದ ಕಾಸ್ಟ್ ಕ್ವಾರಿ ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಸಂಬಂಧಿಸಿದಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

ದಿನಾಂಕ : 01.07.2022

ವೇಳೆ : ಬೆಳಿಗ್ಗೆ 11:00 ಘಂಟೆ,

ಸ್ಥಳ : ಚಿಕ್ಕಸಿಂದೋಗಿ- ಗ್ರಾಮ,

ಮೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ರವರು, ಒಟ್ಟು 20.00 ಎಕರೆ (**8.093 ಹೆಕ್ಟರ್**) ಪ್ರದೇಶದಲ್ಲಿ ವರ್ಷಕ್ಕೆ **41,763 TPA** ಸಾಮಾನ್ಯ **ಮರಳು ಗಣಿಗಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ ತೆರೆದ ಕಾಸ್ಟ್ ಕ್ವಾರಿ ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುತ್ತಾರೆ.** ಈ ಬಗ್ಗೆ ದಿನಾಂಕ: **01,07.2022** ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ. ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಚಿಕ್ಕಸಿಂದೋಗಿ- ಗ್ರಾಮ, |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ. | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | ಅನುಬಂಧ-4 |
| ಪರಿಸರ ಸಾರ್ವಜನಿಕ ಆಲಿಕೆ ಸಭೆ ಪ್ರಕ್ರಿಯೆಯ ಛಾಯಾ ಚಿತ್ರಗಳು | ಅನುಬಂಧ-6 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು. | ಅನುಬಂಧ-7 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ: 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಪತ್ರದ ಸಂಖ್ಯೆ:ಸಂ.ಗಭೂಇ/ಕೊಖವಿ/ಸಾಮಗು/2020-21/3148 Dated:23.10.2020 ರಂದು " ಸಾಮಾನ್ಯ ಮರಳು ಗಣಿಗಾರಿಕೆ " ಯೋಜನೆಯನ್ನು ಅನುಮೋಧಿ 20.00 ಎಕರೆ (8.093 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 75,174 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ ತೆರೆದ ಕಾಸ್ಟ್ ಕ್ವಾರಿ ಪ್ರಕಾರ ಉತ್ಪಾದನೆಯ ಯೋಜನೆಯನ್ನು ಹೊಂದಿದೆ. (ಕ್ವಾರಿ

ಯೋಜನೆಯ ಅವಧಿ 05 ವರ್ಷ). ಕ್ವಾರಿ ಯೋಜನೆಯನ್ನು ಅನುಮೋದಿಸಿ ವರ್ಷಕ್ಕೆ 41,763 TPA ಸಾಮರ್ಥ್ಯದ ಮರಳು ಗಣಿಗಾರಿಕೆಯನ್ನು ಉತ್ಪಾದನೆಯ ಯೋಜನೆಯನ್ನು ಹೊಂದಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವದೆಹಲಿ, ಇವರ ಇ.ಐ.ಫ ಅಧಿಸೂಚನೆ ದಿನಾಂಕ: 14-09-2006 ರ ಪ್ರಕಾರ ಈ ಗಣಿಗಾರಿಕೆ ಯೋಜನೆಯು ಬಿ-1 ವರ್ಗವೆಂದು ಪರಿಗಣಿಸಲಾಗಿದೆ. ಯೋಜನೆ ಚಟುವಟಿಕೆ 1 (ಎ) ಇ.ಐ.ಎ ಅಧಿಸೂಚನೆ ಪರಿಸರ ಮಟ್ಟದ ಪ್ರಭಾವದ ಮೌಲ್ಯಮಾಪನ (ಇ.ಓ.ಎ) ಮತ್ತು ಪರಿಸರ ನಿರ್ವಹಣಾ ಯೋಜನೆ (ಇ.ಎಂ.ಪಿ) ನಿಯಮಗಳ ಉಲ್ಲೇಖದ (ಟಿ.ಓ.ಆರ್) ಆದಾರದ ಮೇಲೆ ಸದರಿ ಯೋಜನೆಯ Standards Terms of Reference ಅನ್ನು ದಿನಾಂಕ: 06.12.2021 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಮೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ತಿಳಿಸಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ ಮತ್ತು ಸಮಯವನ್ನು ನೀಡಲು ದಿನಾಂಕ:09.06.2022ರಂದು ಪತ್ರದ ಮೂಲಕ ಕೋರಲಾಗಿರುತ್ತದೆ. ಅದರಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 01.07.2022 ರಂದು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ " ವಿಜಯ ಕರ್ನಾಟಕ" (ಕನ್ನಡ) ," ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್" (ಆಂಗ್ಲ ಭಾಷೆ) ಯಲ್ಲಿ ದಿನಾಂಕ:01.06.2022. ಹಾಗೂ ಸ್ಥಳೀಯ ಮಟ್ಟದಲ್ಲಿ "ಸುದ್ದಿಮೂಲ" ದಿನ ಪತ್ರಿಕೆಯಲ್ಲಿ ದಿನಾಂಕ:01.06.2022 ರಂದು ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಯೋಜನೆಯ ಕಾರ್ಯಕಾರಿ ವರದಿ ಸಾರಾಂಶದ ಕನ್ನಡ ಮತ್ತು ಇಂಗ್ಲೀಷ್ ಪುಸ್ತಕಗಳನ್ನು ಈ ಕೆಳಗಿನ ಸರ್ಕಾರಿ ಕಛೇರಿಗಳಲ್ಲಿ ಇಡಲಾಗಿತ್ತು

- ಜಿಲ್ಲಾಧಿಕಾರಿಗಳ ಕಛೇರಿ ಕೊಪ್ಪಳ, ಜಿಲ್ಲೆ ಕೊಪ್ಪಳ
- ಮುಖ್ಯ ಕಾರ್ಯನಿರ್ವಾಕ ಕಛೇರಿ, ಜಿಲ್ಲಾ ಪಂಚಾಯತ್, ಕೊಪ್ಪಳ
- ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ

- ತಹಶೀಲ್ದಾರ ಕಾರ್ಯಾಲಯ, ಕುಷ್ಟಗಿ
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ
- ಸ್ಟೇಟ್ ಲೇವಲ್ ಎನ್‌ವಿರಾನ್‌ಮೆಂಟ್ ಇಮ್‌ಪ್ಯಾಕ್ಟ್ ಅಸೆಸ್‌ಮೆಂಟ್ ಅಥಾರಿಟಿ (State Level environment impact assessment authority )
- ಸಹಾಯ ವಾಣಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ- ಬೆಂಗಳೂರು
- ಗ್ರಾಮ ಪಂಚಾಯತಿ ಅಭಿವೃದಿ ಅಧಿಕಾರಿಗಳು, ಕಡೂರು- ಗ್ರಾಮ ಪಂಚಾಯತಿ

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: ದಿನಾಂಕ: 01.07.2022ರಂದು, ಬೆಳಿಗ್ಗೆ 11.00 ಘಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎಸ್ ಸಿ ಸುರೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ಶ್ರೀ ವಿಕಾಸ್ ಕಿಶೋರ್ ಸುರಳ್ಕರ್ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ ಹಾಗೂ ಶ್ರೀ ದೊಡ್ಡಶಾಣಯ್ಯ, ಹಿರಿಯ ಪರಿಸರ ಅಧಿಕಾರಿಗಳು (ಹೆಚ್ಚುವರಿ ಪ್ರಭಾರ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಬಳ್ಳಾರಿ ಮತ್ತು ಕೊಪ್ಪಳ ತಹಶೀಹಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಸ್ವಾಗತಿಸಿದರು, ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಎಂಟು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಶ್ರೀ ಅಶ್ವಥ್ ನಾರಾಯಣ್ ಎಮ್ ಎಸ್, ಎನ್‌ವಿರೋ ಸಲ್ಯೂಶನ್ ಇವರು ಸದರಿ ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು.ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

**ಶ್ರೀ ಈಶಪ್ಪ ಮಾದಿನೂರು , ಹಿರೇಸಿಂದೊಗಿ-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- ನೀರು ಬಳಕೆದಾರರ ಸಂಘದಿಂದ ಸ್ವಾಗತ ಕೊರುತ್ತೇನೆ.
- ಸದರಿ ಗಣಿಗಾರಿಕೆಯ ಬಗ್ಗೆ ಪರಿಸರ ಸಲಹೆಗಾರರು ವಿಸ್ತಾರವಾಗಿ ವಿವರಿಸಿರುತ್ತಾರೆ ಮತ್ತು ಗಣಿಗಾರಿಕೆಯಿಂದ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅನೂಕೂಲವಾಗುತ್ತದೆ ಎಂದು ತಿಳಿಸಿರುತ್ತಾರೆ. ಹಿರೇಹಳ್ಳ ವ್ಯಾಪ್ತಿಯಲ್ಲಿ 150 ರಿಂದ 300 ಪಂಪ್‌ಸೆಟ್‌ಗಳಿದ್ದು ಅದರಿಂದ ಈ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿರುತ್ತೇವೆ. ಈ ಗಣಿಗಾರಿಕೆಯು ಬಂದಲ್ಲಿ ಅಂತರ್ಜಲ ಬತ್ತುವ ಸಾಧ್ಯತೆಗಳಿರುತ್ತದೆ. ಆದ್ದರಿಂದ ಗಣಿಗಾರಿಕೆ ಮಾಡಲು ಅವಕಾಶ ನೀಡಬಾರದು.
- ಭಾಗ್ಯನಗರದಿಂದ ಗೃಹಬಳಕೆ ತ್ಯಾಜ್ಯ ನೀರು ಹಿರೇಹಳ್ಳಕ್ಕೆ ಸೇರುತ್ತಿದ್ದು ಕುಡಿಯುವ ನೀರು ಮತ್ತು ಪ್ರಾಣಿ ಪಕ್ಷಿಗಳಿಗೆ ತೊಂದರೆ ಉಂಟಾಗುತ್ತದೆ.
- ಗೃಹಬಳಕೆ ತ್ಯಾಜ್ಯ ನೀರನ್ನು ಹಿರೇಹಳ್ಳಕ್ಕೆ ಬರದಂತೆ ಕ್ರಮ ಕೈಗೊಳ್ಳು ವಿನಂತಿಸಿದರು ಮತ್ತು ಸಂಸ್ಕರಣಾ ಘಟಕದಲ್ಲಿ ಶುದ್ದಿಕರಿಸಿ ಹಿರೇಹಳ್ಳಕ್ಕೆ ಬಂದಲ್ಲಿ ನಮ್ಮ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿದರು.

- ಹಿರೇಹಳ್ಳ ಪ್ರದೇಶದಲ್ಲಿ 15 ಆಳದ Shallow of Borewells ಗಳಿದ್ದು 3 ಅಡಿ ಆಳದ ಮರಳು ಗಣಿಗಾರಿಕೆ ಮಾಡಿದ್ದಲ್ಲಿ ಅಂತರ್ಜಲ ಮರುಪೂರಣಕ್ಕೆ ತೊಂದರೆಯಾಗುತ್ತದೆ.
- ಹಿರೇಹಳ್ಳ ಪ್ರದೇಶದ ನೀರನ್ನು ಉಪಯೋಗಿಸಿಕೊಂಡು ಈ ಭಾಗದ ಜನರು ವ್ಯವಸಾಯ ಮಾಡಿ ಜೀವನ ಮಾಡುತ್ತಿರುತ್ತಾರೆ. ಆದ್ದರಿಂಜ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದು ಈ ಹಿಂದೆ ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆ ಅವಕಾಶ ನೀಡಿದಾಗ ಹೋರಾಟ ಮಾಡಿ ಮರಳು ಗಣಿಗಾರಿಕೆಯನ್ನು ತಡೆದಿರುತ್ತೇವೆ.

ಹಟ್ಟಿ ಗೊಲ್ಡ್ ಮೈನ್ ಕಂಪನಿ ಲಿಮಿಟೆಡ್‌ನ ಸಿಬ್ಬಂಧಿಯವರು 0.5 ಮೀಟರ್ಸ್ ಆಳದ ವರೆಗೆ ಜೆಸಿಬಿಯ ಡೊಜರ್‌ನಲ್ಲಿ ಸ್ಕೂಪ್ ಮಾಡಿ ಮರಳು ಗಣಿಗಾರಿಕೆ ಮಾಡಲಾಗುವುದು ಆಳದ ಮರಳು ಗಣಿಗಾರಿಕೆ ಮಾಡಲು ಅವಕಾಶವಿರುವುದಿಲ್ಲ ಇದರಿಂದ ಬೋರ್ ವೆಲ್‌ಗಳಿಗೆ, ಮೊಟರ್ ಪಂಪ್‌ಸೆಟ್‌ಗಳಿಗೆ ಮತ್ತು ನೀರು ಬಸಿಯುವಿಕೆಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ತಿಳಿಸಿರುತ್ತಾರೆ.

**ಶ್ರೀ ಚಂದನ ಗೌಡ ಪೋಲಿಸ್ ಪಾಟೀಲ್ ಹಿರೇಸಿಂದೊಗಿ-ಗ್ರಾಮ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- ಚಿಕ್ಕಸಿಂದೋಗಿ ಮತ್ತು ಹಿರೇಸಿಂದೊಗಿ ಗ್ರಾಮಕ್ಕೆ ಬರುವ ರೈತರು ಇದೇ ನೀರನ್ನು ಅವಲಂಬಿಸಿಕೊಂಡು ಜೀವನವನ್ನು ನಡೆಸುತ್ತಿರುತ್ತೇವೆ. 01 ಎಕರೆಯಿಂದ 03 ಎಕರೆ ವರೆಗಿನ ಜಮೀನುಗಳಿದ್ದು ಅದರಲ್ಲಿ ಬೆಳೆ ಬೆಳೆದು ಜೀವನ ನಡೆಸುತ್ತಿರುತ್ತೇವೆ 0.5 ಮೀಟರ್ಸ್ ಆಳದ ಮರಳು ಗಣಿಗಾರಿಕೆ ಮಾಡುವುದರಿಂದ ಅಂತರ್ಜಲ ಕುಸಿಯುವುದಾಗಿ ತಿಳಿಸಿರುತ್ತಾರೆ.
- ಹಿರೇಹಳ್ಳ ಪ್ರದೇಶದಲ್ಲಿ 15 ಆಳದ Shallow of Borewells ಗಳಿದ್ದು ಅದರಲ್ಲಿ ವ್ಯವಸಾಯ ಮಾಡುತ್ತಿರುತ್ತೇವೆ. 03 ರಿಂದ 04 ಆಳದ ಮರಳು ಗಣಿಗಾರಿಕೆ ಮಾಡಿದ್ದಲ್ಲಿ ಉಳಿದ 06 ಅಡಿ ಆಳ ಉಳಿಯುತ್ತದೆ ಇದರಿಂದ ನೀರಿನ ಮೂಲ ಮತ್ತು ಅಂತರ್ಜಲ ಕಡಿಮೆಯಾಗುತ್ತದೆ.
- ಸಿಂಗಟಾಲೂರು ಏತ ನೀರಾವರಿ ಕಾಲುವೆಯ ಕಾಮಗಾರಿ ಪೂರ್ಣಗೊಂಡಿದಾಗ್ಯೂ ಸಹ ಕಾಲುವೆಯಲ್ಲಿ ನೀರು ಹರಿಯುತ್ತಿರುವುದಿಲ್ಲ. ಆದ್ದರಿಂದ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದು ಈ ಹಿಂದೆ ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆ ಅವಕಾಶ ನೀಡಿದಾಗ ಹೋರಾಟ ಮಾಡಿ ಮರಳು ಗಣಿಗಾರಿಕೆಯನ್ನು ತಡೆದಿರುತ್ತೇವೆ.

**ಶ್ರೀ ಲಿಂಗಪ್ಪ ದೇವಪ್ಪ ಯತ್ನಟ್ಟಿ ಹಿರೇಸಿಂದೊಗಿ -ಗ್ರಾಮ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- ಸದರಿ 03 ಅಡಿ ಗಣಿಗಾರಿಕೆ ಮಾಡುತ್ತಾರೆ ಎಂದು ತಿಳಿಸಿರುತ್ತಾರೆ ಈ ಹಳ್ಳದ ದಂಡೆಯಲ್ಲಿ ಹಿರೇಹಳ್ಳ ಪ್ರದೇಶದಲ್ಲಿ 15 ಆಳದ Shallow of Borewells ಗಳನ್ನು ಅಳವಡಿಸಿದ್ದು 03 ಅಡಿ ಆಳದಲ್ಲಿ ನಮ್ಮ ಪೈಪ್ ಲೈನ್‌ಗಳಿರುತ್ತವೆ ಇದರಿಂದ. ಎಲ್ಲ ಪೈಪ್ ಲೈನ್‌ಗಳು ಹಾನಿಗೊಳಗಾಗುತ್ತವೆ. ಸದರಿ ಪ್ರದೇಶದಲ್ಲಿರುವ ಬೋರ್‌ವೆಲ್‌ಗಳು ಸಹ ಕೆಟ್ಟು ಹೊಗುತ್ತವೆ.

**ಶ್ರೀ ಬಸವರಾಜ ಹಿರೇಮಠ ಹಿರೇಸಿಂದೊಗಿ -ಗ್ರಾಮ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.**

- 03 ಅಡಿ ಮರಳು ಗಣಿಗಾರಿಕೆಗೆ ಮಾಡಿದ್ದಲ್ಲಿ ನೀರಿನ ಮಟ್ಟ ಕುಸಿಯುತ್ತದೆ ಮತ್ತು ಈ ಪ್ರದೇಶದ ಜಮೀನುಗಳಲ್ಲಿ ಕಬ್ಬು ಬೆಳೆ ಬೆಳೆದ್ದಿದ್ದು ಹಳ್ಳದ ನೀರಿನಿಂದ ವ್ಯವಸಾಯ ಮಾಡುತ್ತಿರುತ್ತಾರೆ. ಆದ್ದರಿಂದ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದು.

ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತ ಹೇಳಿಕೆಗಳನ್ನು ಕ್ರೂಢಿಕರಿಸಿ ನಡುವಳಿಗಳನ್ನು ತಯಾರಿಸಲು ಸೂಚಿಸುತ್ತಾ, ಈ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು.

- ಉದ್ದೇಶಿತ ಮರಳು ಗಣಿಗಾರಿಕೆಯು 0.5 ಮೀಟರ್ ಆಳದವರೆಗೆ ಗಣಿಗಾರಿಕೆ ಮಾಡಲಾಗುತ್ತದೆ ಎಂದು ಪ್ರಸ್ತಾಪಿಸಿರುವ ಅಂಶವು ಅಪ್ರಯೋಗಿಕವಾಗಿರುತ್ತದೆ ಹಾಗೂ ಯೋಜನೆಯಲ್ಲಿ ಅರೆ ಯಾಂತ್ರಿಕವಾಗಿ ಮರಳು ಗಣಿಗಾರಿಕೆ ಮಾಡಲು ಪ್ರಸ್ತಾಪಿಸಿದ್ದು ಅಪ್ರಯೋಗಿಕವಾಗಿರುತ್ತದೆ. ಸದರಿ ಪ್ರದೇಶದ ಮೇಲ್ಭಾಗದಲ್ಲಿ ಗರಿಷ್ಠ ಮಟ್ಟದಲ್ಲಿ ಮರಳು ಲಭ್ಯವಿರುವುದಿಲ್ಲ. ಪರಿಸರ ಅನುಮತಿ (Environment Clearance) ಯಲ್ಲಿ 0.5 ಮೀಟರ ಆಳದವರೆಗೆ ಗಣಿಗಾರಿಕೆ ಅನುಮತಿ ನೀಡಿದ್ದಲ್ಲಿ ದುರುಪಯೋಗ ಮತ್ತು ಆರೋಪಗಳು ಬರಬಹುದಾಗಿರುತ್ತದೆ. **ಉದ್ದೇಶಿತ ಅರೇ ಯಾಂತ್ರೀಕೃತ ಮರಳು ಗಣಿಗಾರಿಕೆ ಹಾಗೂ 0.5 ಮೀಟರ ಆಳದವರೆಗೆ ಗಣಿಗಾರಿಕೆ ಜರುಗಿಸುವುದು ಅಪ್ರಯೋಗಿಕವಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಮ್ಮ ಅನಿಸಿಕೆ ವ್ಯಕ್ತ ಪಡಿಸಿದರು.**
- ಸದರಿ ಪ್ರದೇಶದಲ್ಲಿ ಇರುವ ಜಮೀನುಗಳು ಪ್ರಸ್ತಾಪಿತ ಹಳ್ಳ ನೀರಿನ ಮೇಲೆ ಅವಲಂಬನೆಯಾಗಿದ್ದು, ಸದರಿ ಹಳ್ಳದ ಸುತ್ತ ಮುತ್ತಲಿನ ಜಮೀನುಗಳನ್ನು ಸುಮಾರು 300 ಪಂಪ್‌ಸೆಟ್‌ಗಳು ಇರುತ್ತವೆ ಎಂದು ಹಾಗೂ ಕೆಲವು ಜಮೀನುಗಳನ್ನು ಕೊಳವೆ ಬಾವಿಗಳು ಇರುತ್ತವೆ ಎಂದು ತಿಳಿಸಿ ಮರಳು ಗಣಿಗಾರಿಕೆಗೆ ಅನುಮತಿಸಿದ್ದಲ್ಲಿ ಅಂತರ್ಜಲ ಮಟ್ಟ ಕುಸಿದು ಜಮೀನುಗಳು ಬರಡು ಬೀಳುವ ಸಂಭವವಿರುತ್ತದೆ, ಇದರಿಂದಾಗಿ ಸದರಿ ಜಮೀನುಗಳಲ್ಲಿ ಬೆಳೆಗಳ ಮೇಲೆ ಪರಿನಾಮ ಉಂಟಾಗುತ್ತದೆ ಎಂದು ತಿಳಿಸಿ ಈ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರ ಪೈಕಿ ಶೇ. 90% ರಷ್ಟು ಸಾರ್ವಜನಿಕರು ಮರಳು ಗಣಿಗಾರಿಕೆ ನೀಡಲು ತಮ್ಮ ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ.
- ಸಾರ್ವಜನಿಕರ ಅಭಿಪ್ರಾಯ ಹಾಗೂ ಸಂಬಂಧಿಸಿದ ಏಜೆನ್ಸಿಯವರು ಪುನಃ ಅಧ್ಯಯನವನ್ನು ಕೈಗೊಂಡು, ಮರು ಅಧ್ಯಯನ ಮಾಡಿರುವ ವರದಿ ಹಾಗೂ ಸಾರ್ವಜನಿಕರ ಅಭಿಪ್ರಾಯದಂತೆ ಸರ್ಕಾರದ ಮಟ್ಟದಲ್ಲಿ ತಿರ್ಮಾನ ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಸದರಿ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದರು.

(ವಿಕಾಸ್ ಕಿಶೋರ್ ಸುರಳ್ಕರ್ ಭಾ.ಆ.ಸೇ.)
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಪರಿಸರ ಸಾರ್ವಜನಿಕ ಆಲಿಕೆ ಸಭೆ ಕೊಪ್ಪಳ